ಮತ್ತು ಸಮಚಿತ್ತತೆ ಅವಳಿಗೆ ಕುಟುಂಬದಲ್ಲಿ ಕ್ರಮೇಣ ಗೌರವ ತಂದುಕೊಟ್ಟವು. ಪಾರ್ವತಿಯು ಕುಟುಂಬದಲ್ಲಿ ಹಣ ಸೋರಿಕೆಯಾಗುವುದನ್ನು ಕಂಡು ಹಿಡಿದು ಮೊದಲು ಅದನ್ನು ತಡೆಗಟ್ಟಿದಳು. ಮನೆಯಲ್ಲಿ ಇರುವ ಗಂಡನ ಮತ್ತು ಮೈದುನನ ಲೋಪದೋಷಗಳೇನು, ನಾದಿನಿಯರ ಸ್ವಭಾವಗಳೇನು ಎಂಬುದನ್ನು ಸ್ವಲ್ಪ ಸಮಯದಲ್ಲಿಯೇ ಅರಿತು, ಅವರ ಆತ್ಮಗೌರವಕ್ಕೆ ಚ್ಯುತಿಯಾಗದಂತೆ ನಿಧಾನವಾಗಿ ಎಲ್ಲರನ್ನೂ ತಿದ್ದತೊಡಗಿದಳು. ಮನೆಯಲ್ಲಿ ಎಲ್ಲರೂ ದುಡಿಯುತ್ತಿದ್ದರೂ ಅವರವರಿಗೆ ಇಷ್ಟಬಂದಂತೆ ಹಣ ಖರ್ಚು ಮಾಡುತ್ತಿದ್ದುದನ್ನು ಸರಿಪಡಿಸಿ, ಎಲ್ಲರಿಗೂ ಒಪ್ಪಿಗೆಯಾಗುವಂತಹ ಸೂತ್ರವನ್ನು ತಂದ ಮೇಲೆ ಅನವಶ್ಯಕ ಹಣ ಸೋರಿಕೆಯಾಗುವುದು ನಿಂತಿತು. ಗಂಡ ನಂಜಯ್ಯನು ಯಾವುದಕ್ಕೂ ತಲೆಕೆಡಿಸಿಕೊಳ್ಳದ ಬೋಳೆ ಸ್ವಭಾವದವನಾಗಿದ್ದನು. ಅವನಿಗೆ ಬೀಡಿ ಸೇದುವುದು ಮತ್ತು ಹೊಗೆಸೊಪ್ಪು ಅಗಿಯುವ ಚಟಗಳ ಜೊತೆಗೆ ಕೆಲಸಕ್ಕೆ ಬರುತ್ತಿದ್ದ ಒಬ್ಬಳನ್ನು ಇಟ್ಟುಕೊಂಡಿದ್ದಾನೆಂದು ಊರಿನಲ್ಲಿ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಹಾಗೇ ಬಿಟ್ಟರೆ ತನ್ನ ಗಂಡನು ಹೊಲಗದ್ದೆಗಳನ್ನು ಅವಳ ಹೆಸರಿಗೆ ಮಾಡಿಕೊಟ್ಟಾನೆಂಬ ಭಯದಿಂದ ಅವಳನ್ನು ಯಾರಿಗೂ ಗೊತ್ತಿಲ್ಲದಂತೆ ಭೇಟಿ ಮಾಡಿ, ಅವಳಿಗೆ ಬುದ್ಧಿಮಾತುಗಳನ್ನು ಹೇಳಿದಳು. ಆದರೆ ಅಷ್ಟು ಸುಲಭವಾಗಿ ಅವಳು ಮಾತಿಗೆ ಬಗ್ಗುವುದಿಲ್ಲವೆಂದು ತಿಳಿಯಿತು. 'ನಾನು ಮನಸ್ಸು ಮಾಡಿದರೆ ನಿನ್ನನ್ನು ಜೈಲಿಗೆ ಕಳುಹಿಸುತ್ತೇನೆ' ಎಂದು ಆಕೆಯನ್ನು ಬೆದರಿಸಲು ಪಾರ್ವತಿಯು ಪೊಲೀಸ್ ಪೇದೆಯಾಗಿದ್ದ ತನ್ನ ಚಿಕ್ಕಪ್ಪನ ಮಗನನ್ನು ಪೊಲೀಸ್ ಯೂನಿಫಾರಂನಲ್ಲಿಯೇ ತನ್ನ ಮನೆಗೆ ಕರೆಸಿ, ಊರಲ್ಲೆಲ್ಲಾ ಅವನು ಎಲ್ಲರ ಕಣ್ಣಿಗೂ ಬೀಳುವಂತೆ ಸುತ್ತಾಡಿಸಿದಳು. 'ಪಾರ್ವತಿಯ ತಮ್ಮ ಪೊಲೀಸ್' ಎಂಬ ವಿಷಯ ಊರಲ್ಲೆಲ್ಲಾ ವಿಶೇಷವಾಗಿ ಆ ಕೆಲಸದವಳಿಗೆ ಗೊತ್ತಾಗುವಂತೆ ಮಾಡಿದಳು. ಅಷ್ಟೇ ಅಲ್ಲದೇ ಅವಳ ಮನೆಯ ಹತ್ತಿರ ಬಂದ ಪೊಲೀಸ್ ಆಕೆಗೆ ನಂಜಯ್ಯನೊಂದಿಗೆ ಇರುವ ಅಕ್ರಮ ಸಂಬಂಧದ ಬಗ್ಗೆ ಮಾತನಾಡಿ ಎಚ್ಚರಿಕೆ ನೀಡಿದನು. ಇದರಿಂದ ಹೆದರಿದ ಆ ಕೆಲಸದವಳು ರಾತ್ರೋರಾತ್ರಿ ಮನೆ ಖಾಲಿ ಮಾಡಿಕೊಂಡು ಊರನ್ನೇ ಬಿಟ್ಟು ಓಡಿಹೋದಳು. ಅಂತೂ ಅವಳನ್ನು ತನ್ನ ಗಂಡನಿಂದ ಬೇರ್ಪಡಿಸಿದ ಪಾರ್ವತಿಯು ಮನೆತನದ ಗೌರವವನ್ನು ಉಳಿಸಿದಳು. ಅಲ್ಲದೆ ತನ್ನ ಎಲ್ಲಾ ವ್ಯಾವಹಾರಿಕ ಚಾಣಕ್ಷತನವನ್ನು ಉಪಯೋಗಿಸಿಕೊಂಡ ಪಾರ್ವತಿಯು ಆ ವರ್ಷ ಸಾಕಷ್ಟು ಹಣ ಉಳಿಸಿ, ಕುಟುಂಬಕ್ಕೆ ಬೇಕಾದ ದೊಡ್ಡ ಮನೆಯನ್ನು ಕಟ್ಟಿಸಲು ಶುರುಮಾಡಿದಳು. ಅದರಲ್ಲಿ ಅಡುಗೆ ಮನೆ, ವಿಶಾಲವಾದ ಹಾಲ್, ರಾಗಿ ಮತ್ತು ಭತ್ತಕ್ಕೆ ಬೇಕಾದ ಉಗ್ರಾಣ, ತೋಟದಲ್ಲಿ ಬೆಳೆದ ತೆಂಗಿನಕಾಯಿಗಳನ್ನು ಸಂಗ್ರಹ ಮಾಡುವುದಕ್ಕೆ ಒಂದು ಕೋಣೆ, ದನಗಳ ಕೊಟ್ಟಿಗೆ, ಇದಲ್ಲದೆ ಕಂಬಗಳ ಆಸರೆಯುಳ್ಳ ಒಂದು ವಿಶಾಲವಾದ ಹಜಾರವುಳ್ಳ, ಹಳ್ಳಿಯಮಟ್ಟಿಗೆ ಸ್ವಲ್ಪ ದೊಡ್ಡದೆನ್ನಬಹುದಾದ ಮನೆಯನ್ನು ಕಟ್ಟಿಸಿದಳು. ಅದು ಆ ಊರಿನ ಆಸುಪಾಸಿನಲ್ಲಿ ಕ್ರಮೇಣ 'ದೊಡ್ಡ ಕಲ್ಲುಮನೆ' ಎಂದು



ಹೆಸರಾಯಿತು. ಪಾರ್ವತಮ್ಮನಿಗೆ 'ಕಲ್ಲಿನಮನೆ ಪಾರ್ವತಮ್ಮ' ಎಂಬ ಅಡ್ಡಹೆಸರು ಬಂತು.

ಮೈದುನನಿಗೆ ಓದಿನಲ್ಲಿ ಆಸಕ್ತಿ ಇರುವುದನ್ನು ಗಮನಿಸಿದ ಪಾರ್ವತಿಯು, 10ನೇ ತರಗತಿಯವರೆಗೆ ಓದಿ ಕಾಲೇಜಿಗೆ ಹೋಗದೆ ಮನೆಯಲ್ಲಿದ್ದ ಆತನನ್ನು ಪ್ರೋತ್ಸಾಹಿಸಿ ಮತ್ತೆ ಕಾಲೇಜಿಗೆ ಸೇರಿಸಿ ಚೆನ್ನಾಗಿ ಓದಿಸಿದಳು. ಓದು ಮುಗಿಸಿದ ನಂತರ ಆತ ಹತ್ತಿರದ ಪಟ್ಟಣದಲ್ಲಿ ಸರ್ಕಾರಿ ಮೇಷ್ಟ್ರು ಕೆಲಸ ಗಿಟ್ಟಿಸಿಕೊಂಡನು. ಅನಂತರ ಆತನಿಗೆ ಮದುವೆ ಮಾಡಿದರು. ಆತ ಪಟ್ಟಣದಲ್ಲಿಯೇ ನೆಲೆಸಿ, ಆಗಾಗ್ಗೆ ಹಳ್ಳಿಗೆ